# ಶಿವಪ್ಪ ಕಾಯೊ ತಂದೆ

ಅವರು ಹಿರಿಯ ಸಿನಿಮಾಪ್ರಚಾರಕರ್ತರು. ಕನ್ನಡ ಚಿತ್ರರಂಗದ ಹಲವು ತಲೆಮಾರುಗಳನ್ನು ಹತ್ತಿರದಿಂದ ಕಂಡವರು. ಸಿನಿಮಾ ಸ್ಟಿಲ್ ಫೋಟೊಗಳನ್ನು ಪತ್ರಿಕಾಕಚೇರಿಗಳಿಗೆ ಕೈಯಾರೆ ತಲುಪಿಸುವ ಕಾಲದಿಂದ ಹಿಡಿದು, ಪತ್ರಿಕಾಗೋಷ್ಠಿ ನಡೆದ ಕೆಲವೇ ಗಂಟೆಗಳಲ್ಲಿ ಇ–ಮೇಲ್ ಮೂಲಕ ಮಾಹಿತಿ ರವಾನಿಸುವವರೆಗೂ ಹಲವು ಕಾಲಘಟ್ಟಗಳಲ್ಲಿ ಕೆಲಸ ಮಾಡಿರುವವರು. ‘ದೊಡ್ಡ’ಮನೆಗಳ ಸಿನಿಮಾ ಪ್ರಚಾರಕ್ಕಾಗಿ ದುಡಿದವರು. ಬರಿಗೈಯಲ್ಲಿ ಸಿನಿಮಾರಂಗಕ್ಕೆ ಬಂದು ಕೋಟ್ಯಧಿಪತಿಗಳಾಗಿ ಮೆರೆಯುತ್ತಿರುವ ಹಲವರನ್ನು ಕಂಡಿರುವ ಅವರು ಮಾತ್ರ ಹೆಗಲಿಗೊಂದು ಬ್ಯಾಗ್ ಜೋತಾಡಿಸಿಕೊಂಡು ಓಡಾಡುತ್ತ ಉಳಿದುಬಿಟ್ಟವರು.

ಹೊಸ ಕಾಲದ ಪೈಪೋಟಿಯ ನಡುವೆಯೂ ಅಲ್ಲೋ ಇಲ್ಲೋ ಸಿಗುವ ಸಿನಿಮಾಗಳಿಗೆ ಪ್ರಚಾರಕರ್ತರಾಗಿ ಕೆಲಸ ಮಾಡುತ್ತ ಬದುಕು ಸಾಗಿಸಿದ್ದ ಅವರಿಗೆ ಕಳೆದ ವರ್ಷದ ಕೊರೊನಾ ಲಾಕ್‌ಡೌನ್ ದೊಡ್ಡ ಹೊಡೆತವನ್ನೇ ಕೊಟ್ಟಿತ್ತು. ಸಿನಿಮಾ ಚಟುವಟಿಕೆಗಳೇ ನಿಂತ ಮೇಲೆ ಪ್ರಚಾರಕರ್ತರಿಗೇನು ಕೆಲಸ? ಹೇಗೋ ಒಂದು ವರ್ಷವನ್ನು ಕಷ್ಟದಲ್ಲಿಯೇ ದೂಡಿದ್ದಾಯ್ತು. ಕೊನೆಗೂ ಮತ್ತೆ ಚಿತ್ರರಂಗದಲ್ಲಿ ಕಲರವ ಕೇಳಿಸಲಾರಂಭಿಸಿತು. ಇವರು ಮತ್ತೆ ಹೆಗಲಿಗೆ ಬ್ಯಾಗ್ ಹಾಕಿಕೊಂಡು ಪತ್ರಿಕಾಗೋಷ್ಠಿಗಳಿಗೆ ಹೋಗಲಾರಂಭಿಸಿದರು. ಬದುಕು ಮತ್ತೆ ಸಹಜ ಸ್ಥಿತಿಗೆ ಮರಳುತ್ತಿದೆ ಅನ್ನುವಾಗಲೇ ಬೇರು ಒಣಗಿದ್ದ ಮರದ ಮೇಲೆ ಸಿಡಿಲೂ ಅಪ್ಪಳಿಸಿತ್ತು. ಕೊರೊನಾ ಎರಡನೇ ಅಲೆ ಬಂದಿದ್ದು ಹಾಗೆಯೇ! ಬದುಕಿನ ಅನಿವಾರ್ಯತೆಗಳಿಗಾಗಿ ಹೊರಗಡೆ ಓಡಾಡಿ ಕೆಲಸ ಮಾಡಲೇಬೇಕಿದ್ದ ಅವರ ಅಂಗೈಗೆ ಯಾವುದೋ ಮಾಯದಲ್ಲಿ ಕೋವಿಡ್ ರಾಕ್ಷಸ ಮುತ್ತಿಕ್ಕಿದ್ದ. ಮನಸಲ್ಲಿ ಸದಾ ಸಿನಿಮಾ ಸುದ್ದಿಗಳನ್ನು ತುಂಬಿಕೊಂಡು ಓಡಾಡುತ್ತಿದ್ದ ಆ ಹಿರಿಯರು ಮೈಯಲ್ಲಿ ಕೊರೊನಾ ವೈರಸ್ ಸೇರಿಸಿಕೊಂಡು ಆಸ್ಪತ್ರೆ ಸೇರಿದರು.

ಆಸ್ಪತ್ರೆಯ ಒಂಟಿವಾಸ ಮುಗಿಸಿ ಹೊರಬರುವ ಸಂದರ್ಭದಲ್ಲಿ ಬಿಲ್ ಕಟ್ಟಲು ಅವರ ಬಳಿ ಹಣ ಇರಲಿಲ್ಲ. ಎಷ್ಟೋ ಸಿನಿಮಾಗಳು, ‘ಸೂಪರ್ ಹಿಟ್’ ಆಗುವುದಕ್ಕೆ ಪ್ರಚಾರದ ಬೆನ್ನೆಲುಬಾಗಿ ಕೆಲಸ ಮಾಡಿದ್ದ ಅವರಿಗೆ ಬಂದ ಸ್ಥಿತಿ ಯಾರಿಗೂ ತಿಳಿಯಲೇ ಇಲ್ಲ. ಬಣ್ಣದ ಲೋಕದ ಎಷ್ಟೋ ಏಳುಬೀಳುಗಳ ಜೊತೆಜೊತೆಯೇ ನಡೆದುಕೊಂಡು ಬಂದ ಅವರ ಬದುಕಿನ ಬಣ್ಣ ಕೆಲವೇ ದಿನಗಳಲ್ಲಿ ಮಾಸಿಹೋಗಿತ್ತು.

ಹಾಗೂ ಹೀಗೂ ಯಾರು ಯಾರಿಂದಲೋ ಕಾಡಿ ಬೇಡಿ ಹಣ ಕೂಡಿಸಿ ಆಸ್ಪತ್ರೆಯ ಬಿಲ್ ಕಟ್ಟಿ ಮನೆಗೆ ಬಂದರು. ಅದಾಗಿ ಎರಡೇ ದಿನಕ್ಕೆ ಅವರ ಅಕ್ಕ ಕೊನೆಯುಸಿರೆಳೆದರು. ಸಾವಿನ ಸಮೀಪದರ್ಶನ ಮಾಡಿ ಬದುಕಿಗೆ ಮರಳಿದವರಿಗೆ ರಕ್ತಸಂಬಂಧಿಯ ಮೃತ್ಯುದರ್ಶನ!

ಅವರೀಗ ಪ್ರತಿದಿನ ಸಂಜೆ ಕಟ್ಟುವ ತಮ್ಮದೇ ಮನಸ್ಸಿನ ದುಗುಡದಂಥ ಮೋಡಗಳನ್ನು ನೋಡುತ್ತ, ನಿರಾಸೆಯ ಕಡಲನ್ನು ದಾಟಿಕೊಳ್ಳಲು ಯತ್ನಿಸುತ್ತಿದ್ದಾರೆ.

ಇದು, ಸಿನಿಮಾ ಎಂಬ ಬಣ್ಣದ ಜಗತ್ತಿನ ಬೆಳಕಿನಲ್ಲಿ ಎಂದೂ ಕಾಣಿಸಿಕೊಳ್ಳದ, ಹಾಗೆ ನೋಡಿದರೆ ಸಿನಿಮಾ ಜಗತ್ತಿಗೆ ಹೊರಗಿನ ಸಂಬಂಧಿಯಂತಿರುವ ಒಬ್ಬ ಹಿರಿಯ ಪ್ರಚಾರಕರ್ತರ ಬದುಕಿನ ಕಥೆ. (ತೆರೆಮರೆಯ ಕಥೆ ಎನ್ನಬಹುದೇನೊ.) ಜಗಮಗ ಬೆಳಕಿನ ರೇಕುಗಳನ್ನು ನೋಡುತ್ತ ಸಿನಿಮಾ ಮಾಧ್ಯಮವನ್ನು ಕಲ್ಪಿಸಿಕೊಳ್ಳುವ ನಮಗೆ, ಅದರ ಬುಡದಲ್ಲಿ ಗೋಡೆಗೆ ಹತ್ತುವ ತೇವದಂತೆ ನಿಧಾನ ಏರುತ್ತಿರುವ ಕತ್ತಲು ಗಮನಕ್ಕೆ ಬರುವುದು ಕಡಿಮೆ. ಬಣ್ಣದ ಲೋಕದ ಮಾಯೆಯೇ ಹಾಗೆ; ಅದು ತನ್ನ ಮೈಯ ಗ್ಲ್ಯಾಮರ್ ಅನ್ನು ಢಾಳಾಗಿ ಕಾಣಿಸುತ್ತಿರುತ್ತದೆ. ಆದರೆ ಅದು ನಿಂತ ನೆಲವೇ



‘ಪೊಗರು’ ಚಿತ್ರದಲ್ಲಿ ಧ್ರುವ ಸರ್ಜಾ